ಪ್ರಶ್ನೆಯಲ್ಲಿ ಸಿಬ್ಬಂದಿವರ್ಗದ ಬಗ್ಗೆ ಕೇಳಿದ್ದರಿಂದ ಹೆಚ್ಚಾಗಿ ನಾವು ಅದರ ವಿವರಗಳ ಬಗ್ಗೆ ಹೋಗಿದ್ದೇವೆ. ದಯವಿಟ್ಟು ತಾವು ಇನ್ನೊಂದು ಸಾರಿ ನಷ್ಟದ ಬಗ್ಗೆ ಪ್ರತ್ಯೇಕವಾಗಿ ಪ್ರಶ್ನೆ ಕೇಳಿದರೆ ವಿವರಗಳನ್ನು ತರಿಸಿ ತಮಗೆ ಒದಗಿಸಿಕೊಡುತ್ತೇನೆ.

ಶ್ರೀ ರಾಮಲಿಂಗರೆಡ್ಡಿ.—ಮಾನ್ಯ ಅಧ್ಯಕ್ಷರೆ. ಈ ಕರ್ನಾಟಕ ಆಗ್ರೋ ಪ್ರೊಟೀನ್ಸ್ ಲಿಮಿಟೆಡ್ ಏನಿದೆ ಇದನ್ನು ಕರ್ನಾಟಕ ಸಹಕಾರಿ ಎಣ್ಣೆ ಬೀಜಗಳ ಬೆಳೆಗಾರರ ಮಹಾ ಮಂಡಲಿಗೆ ವಹಿಸಿಕೊಡಲು ಯೋಜಿಸಲಾಗಿದೆ ಎಂದು ಹೇಳಿದ್ದೀರಿ. ಈ ಕರ್ನಾಟಕ ಆಗ್ರೋ ಪ್ರೊಟೀನ್ಸ್ ಲಿಮಿಟೆಡ್‌ನ ಆಸ್ತಿ ಏನಿದೆ ಅದನ್ನು ಮಾತ್ರ ನಿಗಮ ತೆಗೆದುಕೊಳ್ಳುತ್ತದೆ, ಟಳಿ ಕೆಲಸಗಾರರನ್ನು ತೆಗೆದುಕೊಳ್ಳುವುದಿಲ್ಲ ಎಂದು ಸರ್ಕಾರದ ಆಜ್ಞೆ ಇದೆ. ಈ ಟಳಿ ಕೆಲಸಗಾರರು ಆರು ತಿಂಗಳಿಂದ ಸಂಬಳವಿಲ್ಲದೆ ಬೀದಿ ಪಾಲಾಗಿದ್ದಾರೆ. ಈ ಟಳಿ ಕೆಲಸಗಾರರನ್ನು ಎಣ್ಣೆ ಬೀಜದ ನಿಗಮಕ್ಕೆ ಸೇರಿಸುತ್ತೀರೊ ಅಥವಾ ಅವರನ್ನು ಬೀದಿ ಪಾಲು ಮಾಡುತ್ತೀರೋ ಎಂದು ನಾನು ಕೇಳುತ್ತೇನೆ ?

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೆ, ನಷ್ಟವಾಗುವುದಕ್ಕೆ ಹಲವಾರು ಕಾರಣಗಳು ಇವೆ. ಆದರೂ ಸಹ ನಷ್ಟವನ್ನು ತಪ್ಪಿಸುವ ಉದ್ದೇಶದಿಂದ ಕರ್ನಾಟಕ ಆಗ್ರೋ ಪ್ರೊಟೀನ್ಸ್ ಲಿಮಿಟೆಡ್‌ನ್ನು ಸಹಕಾರಿ ಎಣ್ಣೆ ಬೀಜ ಬೆಳೆಗಾರರ ಮಹಾಮಂಡಲಿಗೆ ವಹಿಸುವ ಬಗ್ಗೆ ಸರ್ಕಾರ ಅಂತಿಮ ತೀರ್ಮಾನ ಮಾಡಿಲ್ಲ. ಅದನ್ನು ವಹಿಸಿಕೊಡತಕ್ಕ ವಿಚಾರ ಸರ್ಕಾರದ ಮುಂದೆ ಇದೆ. ವಹಿಸಿಕೊಡತಕ್ಕ ಒಂದು ತೀರ್ಮಾನಕ್ಕೆ ಬಂದಾಗ ಹಾಲಿ ಇರತಕ್ಕ ಟಳಿ ಜನ ಕೆಲಸಗಾರರ ಹಿತವನ್ನು ಕೂಡ ಸರ್ಕಾರ ನೋಡುತ್ತದೆ. ಸಹಜವಾಗಿ ಅರ್ಜೆಂಟಾಗಿ ಬೇಕಾದವರನ್ನು ತೆಗೆದುಕೊಳ್ಳಬೇಕಾಗುತ್ತದೆ. ಟೆಂಪೊರರಿಯಾಗಿ ಇದ್ದವರನ್ನು ಬಿಡತಕ್ಕ ಸಂದರ್ಭ ಬಂದರೂ ಬರಬಹುದು. ತಾವು ೬ ತಿಂಗಳಿಂದ ಸಂಬಳ ಸಿಕ್ಕಿಲ್ಲವೆಂದು ಹೇಳಿದ್ದೀರಿ. ಯಾರು ಕೆಲಸ ಮಾಡಿದ್ದಾರೆ, ಅವರಿಗೆ ಸಂಬಳ ಕೊಡಿಸತಕ್ಕ ಬಗ್ಗೆ ನಾವು ವ್ಯವಸ್ಥೆ ಮಾಡುತ್ತೇವೆ. ಮತ್ತೆ ಅವರಿಗೆ ಮುಂದೆ ಕೆಲಸ ಕೊಡತಕ್ಕ ವಿಚಾರದ ಬಗ್ಗೆ ಸರ್ಕಾರ ಯೋಚನೆ ಮಾಡುತ್ತದೆ.

ಅಧ್ಯಕ್ಷರು.—ಪ್ರಶ್ನೆ ಸಂಖ್ಯೆ ೧೦೭ (೩೬೬)ನ್ನು.

ಶ್ರೀ ಡಿ. ಬಿ. ಚಂದ್ರೇಗೌಡರ ಪರವಾಗಿ ಶ್ರೀ ಪಿ.ಜಿ.ಆರ್. ಸಿಂಧ್ಯ ಅವರು ಕೇಳುತ್ತಾರೆ.

ತೀರ್ಥಹಳ್ಳಿ ನಗರದ ಕುಡಿಯುವ ನೀರಿನ ಯೋಜನೆ ಬಗ್ಗೆ

೩೬೬. ಶ್ರೀ ಡಿ. ಬಿ. ಚಂದ್ರೇಗೌಡ (ತೀರ್ಥಹಳ್ಳಿ).—ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ನಗರದ ಕುಡಿಯುವ ನೀರಿನ ಯೋಜನೆಗೆ ಮಂಜೂರಾತಿ ನೀಡಲಾಗಿದೆಯೇ ?

ಆ) ಹಾಗಿದ್ದಲ್ಲಿ ಅದಕ್ಕೆ ಆಡಳಿತಾತ್ಮಕ ಮಂಜೂರಾತಿ ನೀಡಿದ್ದು ಎಂದು ?

ಇ) ಅದಕ್ಕೆ ತಗಲುವ ಅಂದಾಜು ವೆಚ್ಚ ಎಷ್ಟು ಸದರಿ ಯೋಜನೆಗೆ ಈ ವರ್ಷ ತೆಗೆದಿಟ್ಟ ಹಣವೆಷ್ಟು ?

ಈ) ಈ ಯೋಜನೆಯು ಕಾರ್ಯಪ್ರಾರಂಭವಾಗದಿದ್ದರ ಅದಕ್ಕೆ ಕಾರಣಗಳೇನು ?

ಉ) ಯೋಜನೆಯ ಕಾರ್ಯ ಎಂದಿನಿಂದ ಪ್ರಾರಂಭ ಮಾಡಲಾಗುವುದು ಮತ್ತು ಪೂರ್ಣಗೊಳ್ಳಲು ಎಷ್ಟು ಕಾಲಾವಕಾಶ ಬೇಕಾಗುವುದು ?

ಶ್ರೀ ಟಿ, ಎನ್. ನರಸಿಂಹಮೂರ್ತಿ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ) ನೀಡಲಾಗಿದೆ.

ಆ) ಸರ್ಕಾರದ ಆದೇಶ ಸಂಖ್ಯೆ. ವಸ ೫೩ ಯುಡಬ್ಲ್ಯುಎಸ್ ೮೯, ದಿನಾಂಕ ೨೨-೧-೧೯೯೦.

ಇ) ಈ ಯೋಜನೆಯ ಅಂದಾಜು ವೆಚ್ಚ ರೂ. ೩೧.೦೦ ಲಕ್ಷವಾಗಿದ್ದು ಈ ಯೋಜನೆಯನ್ನು ೧೯೯೦-೯೧ರಲ್ಲಿ ಮಂಡಲಿಯ ಆಯವ್ಯಯ ಪಟ್ಟಿಯಲ್ಲಿ ರೂ. ೫೦,೦೦೦ವನ್ನು ಒದಗಿಸಲಾಗಿದೆ.

ಈ) ೧೯೮೯-೯೦ನೇ ಸಾಲಿನಲ್ಲಿ ಆಯವ್ಯಯ ಪಟ್ಟಿಯಲ್ಲಿ ಹಣವನ್ನು ಒದಗಿಸದೇ ಇದ್ದ ಕಾರಣ ಕಾಮಗಾರಿಯನ್ನು ಪ್ರಾರಂಭಿಸಲು ಸಾಧ್ಯವಾಗಿರಲಿಲ್ಲ.

ಉ) ಈ ಯೋಜನೆಯನ್ನು ಸಧ್ಯದಲ್ಲಿ ಗುತ್ತಿಗೆದಾರರನ್ನು ಗೊತ್ತುಪಡಿಸಿ ಕೆಲಸವನ್ನು ಕೈಗೆತ್ತಿಕೊಳ್ಳಲಾಗುವುದು.

ಸದರಿ ಕಾಮಗಾರಿಯನ್ನು ಡಿಸೆಂಬರ್ ೧೯೬೧ರಲ್ಲಿ ಪೂರ್ಣಗೊಳಿಸಲಾಗುವುದು.

ಶ್ರೀ ಪಿ.ಜಿ.ಆರ್. ಸಿಂಧ್ಯಾ.--ಕೆಲಸ ಮಾಡುತ್ತಿದ್ದೇವೆಂದು ಹೇಳಿದ್ದಾರೆ. ಆದ್ದರಿಂದ ಉಪ ಪ್ರಶ್ನೆ ಕೇಳುವುದು ಏನೂ ಇಲ್ಲ.

ಅಧ್ಯಕ್ಷರು.--ಆಗಬಹುದು.

ಮುದ್ರಣ ಕಾಗದದ ಅಭಾವ

೨೭೯ ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ).—ಮಾನ್ಯ ಶಿಕ್ಷಣ ಯುವಜನ ವ್ಯವಹಾರ ಗಳು, ಕ್ರೀಡೆಗಳು, ಕನ್ನಡ ಹಾಗೂ ಸಂಸ್ಕೃತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸರ್ಕಾರದವರಿಗೆ ಮುದ್ರಣ ಕಾಗದದ ಅಭಾವವಿರುವುದು ನಿಜವೇ

ಆ) ಸರ್ಕಾರಕ್ಕೆ ಒಂದು ವರ್ಷಕ್ಕೆ ಅಗತ್ಯವಿರುವ ಮುದ್ರಣ ಕಾಗದದ ಪ್ರಮಾಣ ಎಷ್ಟು ?

ಇ) ಈಗ ರಾಜ್ಯಕ್ಕೆ ಲಭಿಸುತ್ತಿರುವ ಮುದ್ರಣ ಕಾಗದದ ಪ್ರಮಾಣ ಎಷ್ಟು ? ಹಾಗೂ ಕೊರತೆ ಎಷ್ಟು ?

ಈ) ಈ ಕೊರತೆಯನ್ನು ನೀಗಲು ಸರ್ಕಾರವು ಕೈಗೊಂಡ ಕ್ರಮಗಳೇನು ?

ಶ್ರೀ ಕೆ.ಹೆಚ್. ರಂಗನಾಥ (ಶಿಕ್ಷಣ ಮಂತ್ರಿಗಳು). --

ಅ) ಮುದ್ರಣ ಲೇಖನ ಸಾಮಾಗ್ರಿ ಮತ್ತು ಪ್ರಕಟಣೆಗಳ ಇಲಾಖೆಗೆ ಮುದ್ರಣ ಕಾಗದದ ಅಭಾವ ಅಷ್ಟಾಗಿ ಕಂಡು ಬರುವುದಿಲ್ಲ. ಆದರೆ ಪಠ್ಯ ಪುಸ್ತಕ ಇಲಾಖೆಗೆ ಮುದ್ರಣ ಕಾಗದದ ಅಭಾವವಿರುತ್ತದೆ.

ಆ) ೭೨೬೦ ಮೆಟ್ರಿಕ್ ಟನ್.

ಇ) ರಾಜ್ಯಕ್ಕೆ ಲಭ್ಯವಿರುವ ಮುದ್ರಣ ಕಾಗದ ಪ್ರಮಾಣ ೪೮೫೦ ಮೆಟ್ರಿಕ್ ಟನ್.

ಕೊರತೆಯ ಪ್ರಮಾಣ ೨೪೨೦ ಮೆಟ್ರಿಕ್ ಟನ್.

ಈ) ಮುದ್ರಣ ಲೇಖನ ಸಾಮಗ್ರಿ ಪಂತ್ತು ಪ್ರಕಟಣೆಗಳ ಇಲಾಖೆಗೆ ಇರುವ ಕೊರತೆಯನ್ನು ನೀಗಲು ಆದ್ಯತೆ ಮೇರೆಗೆ ಮುದ್ರಣ ಕಾಗದದ ಸರ್ಕಾರಿ ಸಾಮ್ಯದ ತಯೊರಿಕೆ ಸಂಸ್ಥೆ ಮೆಸರ್ಸ್ ಮೈಸೂರು ಕಾಗದ ಕಾರ್ಖಾನೆ ಇವರೊಂದಿಗೆ ಚರ್ಚಿಸಿ ಸರಬರಾಜು ಮಾಡುವಂತೆ ಕೋರಲಾಗಿದೆ.

ಇದೇ ರೀತಿಯಾಗಿ ಪಠ್ಯಪುಸ್ತಕ ಇಲಾಖೆಗೆ ಇರುವ ಕೊರತೆಯನ್ನು ನೀಗಲು ಸರ್ಕಾರವು ವಾರ್ಷಿಕ ಮಾರುಕಟ್ಟೆಯಲ್ಲಿ ೨೦೦೦ ಮೆಟ್ರಿಕ್‌ಟನ್ ಖರೀದಿ ಮಾಡಲು ಇಲಾಖೆಗೆ ಅನುಮತಿ ನೀಡಿದ್ದು ಇಲಾಖೆಯು ಮೆಸರ್ಸ್ ಮೈಸೂರು ಕಾಗದದ ಕಾರ್ಖಾನೆ ಅಧಿಕಾರಿಗಳೊಂದಿಗೆ ಚರ್ಚಿಸಿ ಆದ್ಯತೆ ಮೇರೆಗೆ ಮುದ್ರಣ ಕಾಗದವನ್ನು ಸರಬರಾಜು ಮಾಡಲು ಕೋರಲಾಗಿದೆ. ಅದರಂತೆ ಪಠ್ಯ ಪುಸ್ತಕ ಇಲಾಖೆಗೆ ಈಗ ಮೆಸರ್ಸ್ ಮೈಸೂರು ಕಾಗದದ ಕಾರ್ಖಾನೆಯವರು ಪ್ರತಿ ದಿವಸವು ೫೦ ಮೆಟ್ರಿಕ್ ಟನ್ ಕಾಗದವನ್ನು ಸರಬರಾಜು ಮಾಡುತ್ತಿದ್ದಾರೆ.

ಶ್ರೀ ಎಂ. ನಾರಾಯಣಸ್ವಾಮಿ.—ಮಾನ್ಯ ಅಧ್ಯಕ್ಷರೆ. ಸರ್ಕಾರದವರು ಮುದ್ರಣ ಕಾಗದದ ಅಭಾವ ಇದೆ ಎನ್ನುವುದನ್ನು ಒಪ್ಪಿಕೊಂಡಿದ್ದಾರೆ ಸುಮಾರು ೨೪೨೦ ಮೆಟ್ರಿಕ್ ಟನ್ ಕೊರತೆ ಇದೆ ಎಂದು ಹೇಳಿದ್ದಾರೆ ಆದರೆ ಪಠ್ಯಪುಸ್ತಕಗಳನ್ನು ಅಚ್ಚು ಹಾಕಿಸಲು ಬೇಕಾದ ಮುದ್ರಣ ಕಾಗದವನ್ನು ಪಡೆಯಲು ಏನಾ ಕ್ರಮ ತೆಗೆದುಕೊಳ್ಳಲಾಗಿದೆ ?

ಶ್ರೀ ಕೆ.ಹೆಚ್. ರಂಗನಾಥ್.ಸನ್ಮಾನ್ಯ ಅಧ್ಯಕ್ಷರೆ, ಈ ಪ್ರಶ್ನೆಯನ್ನು ನನ್ನ ಇಲಾಖೆಗೆ ಕಳುಹಿಸಲಾಗಿದೆ. ಇದನ್ನು ಓದಿದರೆ, ಕ್ರಿಮಿನಲ್ ಇಲಾಖೆಗೆ ಹೋಗಬೇಕಾಗಿತ್ತು ಎಂದು ಅನಿಸುತ್ತದೆ. ವಿದ್ಯಾ ಇಲಾಖೆಗೆ ಸಂಬಂಧಪಟ್ಟಂತೆ ಎಷ್ಟು ಪ್ರಿಂಟಿಂಗ್ ಪೇಪರ್ ಬೇಕೆನ್ನುವುದು ನಿಖರವಾಗಿಲ್ಲ. ಇಲ್ಲಿ ಪೂರ್ಣ ಪ್ರಮಾಣದ ಮುದ್ರಣ ಕಾಗದದ ಬಗ್ಗೆ ಕೇಳಿದ್ದಾರೆ ಆದ್ದರಿಂದ ಇದು ಎಂ.ಎಸ್.ಐ.ಎಲ್.ಗೆ ಸಂಬಂಧಪಡುತ್ತದೆ.